## 2019-20 ನೇ ಸಾಲಿನ ಸ್ಮಾರ್ಟ್‌ಕಾರ್ಡ್ ವಿದ್ಯಾರ್ಥಿ ಪಾಸುಗಳ ವಿತರಣೆ ಬಗ್ಗೆ.

**ಪೀಠಿಕೆ:** ಬೆಂ.ಮ.ಸಾ.ಸಂಸ್ಥೆಯು 2019-20 ನೇ ಸಾಲಿನ ಸ್ಮಾರ್ಟ್‌ಕಾರ್ಡ್ ವಿದ್ಯಾರ್ಥಿ ಪಾಸುಗಳ ವಿತರಣೆಯನ್ನು ಅತೀ ಶೀಘ್ರದಲ್ಲಿ ಪ್ರಾರಂಭಿಸಲಾಗುತ್ತದೆ. ಸ್ಮಾರ್ಟ್‌ಕಾರ್ಡ್ ಮಾದರಿಯ ವಿದ್ಯಾರ್ಥಿ ಪಾಸುಗಳನ್ನು 2018-19 ನೇ ಸಾಲಿನಿಂದ ವಿತರಣೆ ಮಾಡಲು ಕ್ರಮಕೈಗೊಂಡಿದ್ದು, ಸುಮಾರು 3.5 ಲಕ್ಷ ವಿದ್ಯಾರ್ಥಿಗಳು ಸದರಿ ಪಾಸಿನ ಪ್ರಯೋಜನವನ್ನು ಪಡೆದಿರುತ್ತಾರೆ. ಸ್ಮಾರ್ಟ್‌ಕಾರ್ಡ್ ವಿದ್ಯಾರ್ಥಿ ಪಾಸನ್ನು ಹೊಂದಿದ ವಿದ್ಯಾರ್ಥಿಗಳು ಸ್ಮಾರ್ಟ್‌ಕಾರ್ಡ್ ಪಾಸನ್ನು ಉಪಯೋಗಿಸಿ ಸಂಸ್ಥೆಯ ಸಾಮಾನ್ಯ ಸೇವೆಗಳಲ್ಲಿ ಚೀಟಿ ರಹಿತವಾಗಿ ವಾಸ ಸ್ಥಳದಿಂದ ಶಾಲಾ/ಕಾಲೇಜಿನವರೆಗೂ ಪ್ರಯಾಣಿಸಬಹುದಾಗಿರುತ್ತದೆ. ಈ ಸ್ಮಾರ್ಟ್‌ಕಾರ್ಡ್ ಪಾಸನ್ನು ಪಡೆಯಲು ವಿದ್ಯಾರ್ಥಿಗಳು ವಾರ್ಷಿಕವಾಗಿ ಒಂದು ಬಾರಿ ಮಾತ್ರ ಪಾಸಿನ ಮೊತ್ತವನ್ನು(ಪಾಸಿನ ದರದ ಪಟ್ಟಿಯನ್ನು ನೋಡುವುದು) ಪಾವತಿಸಬೇಕಾಗಿರುತ್ತದೆ.

ಸ್ಮಾರ್ಟ್‌ಕಾರ್ಡ್ ವಿದ್ಯಾರ್ಥಿ ಪಾಸುಗಳ ವಿತರರಣಾ ಕ್ರಮ ಮತ್ತು ಪ್ರಕ್ರಿಯೆಗಳ ಬಗ್ಗೆ ಎಲ್ಲಾ ಪಾಸುದಾರರಿಗೆ ತಿಳಿಸಲು ಹಾಗೂ ಸುಗಮವಾಗಿ ಪಾಸುಗಳನ್ನು ವಿತರಿಸಲು ಉದ್ದೇಶಿಸಲಾಗಿದೆ. ಪಾಸುಗಳ ವಿತರಣಾ ಅಂದಾಜು ದಿನಾಂಕದ ವೇಳಾಪಟ್ಟಿಯು ಈ ಕೆಳಕಂಡಂತಿದೆ.

| ಕ್ರ.ಸಂ | ವರ್ಗ | ವೇಳಾಪಟ್ಟಿ |
|---|---|---|
| 1 | ಶಿಕ್ಷಣ ಸಂಸ್ಥೆಗಳ ನೋಂದಣಿ ಪ್ರಾರಂಭ ದಿನಾಂಕ | 15 ಮೇ 2019 |
| 2 | 1 ನೇ ತರಗತಿಯಿಂದ 10 ನೇ ತರಗತಿಯವರೆಗೆ (ಖುಖಿಖ ನಲ್ಲಿದಾಖಲಾಗಿರುವ ಶಾಲೆಗಳು) | 2019 ರಜೂನ್ ಮೊದಲನೇ ವಾರ |
| 3 | 1 ನೇ ತರಗತಿಯಿಂದ 10 ನೇ ತರಗತಿಯವರೆಗೆ (ಸಿ.ಬಿ.ಎಸ್.ಇ & ಐ.ಸಿ.ಎಸ್.ಇ. ಶಾಲೆಗಳು) | 2019 ರಜೂನ್ ಮೊದಲನೇ ವಾರ |
| 4 | ಇತರೆ (ವಿಶೇಷ ಮಕ್ಕಳ ಶಾಲೆಗಳು) | 2019 ರಜೂನ್ ಮೊದಲನೇ ವಾರ |
| 5 | ಪಿ.ಯು.ಸಿ ವಿದ್ಯಾರ್ಥಿಗಳು (ಪ್ರಥಮ ಪಿಯುಸಿ) | 2019 ರಜೂನ್‌ಮೊದಲನೇ ವಾರ |
| 6 | ಪಿ.ಯು.ಸಿ ವಿದ್ಯಾರ್ಥಿಗಳು (ದ್ವಿತೀಯ ಪಿಯುಸಿ) | 2019 ರಜೂನ್‌ಮೊದಲನೇ ವಾರ |
| 7 | 11 ಮತ್ತು 12 ನೇ ತರಗತಿ ವಿದ್ಯಾರ್ಥಿಗಳು (ಸಿ.ಬಿ.ಎಸ್.ಇ & ಐ.ಸಿ.ಎಸ್.ಇ. ಶಾಲೆಗಳು) | 2019 ರಜೂನ್ ಮೊದಲನೇ ವಾರ |
| 8 | ಪದವಿ, ವೃತ್ತಿಪರ, ಸಂಜೆಕಾಲೇಜು ಮತ್ತು ಪಿ.ಹೆಚ್.ಡಿ ವಿದ್ಯಾರ್ಥಿಗಳು | 2019 ರಜುಲೈ ಮೊದಲನೇ ವಾರ |
| 9 | ತಾಂತ್ರಿಕ ಮತ್ತು ವೈಧ್ಯಕೀಯ ವಿದ್ಯಾರ್ಥಿಗಳು | 2019 ರಆಗಸ್ಟ್ ಮೊದಲನೇ ವಾರ |

- **15-ಮೇ- 2019 ರ ನಂತರಆನ್‌ಲೈನ್ ಮೂಲಕ ಕಾಲೇಜುಗಳ ನೋಂದಣಿ ಪ್ರಕ್ರಿಯೆಯು ಪ್ರಾರಂಭವಾಗುವುದು.**

1. **ತಂತ್ರಜ್ಞಾನ:** ಸ್ಮಾರ್ಟ್‌ಕಾರ್ಡ್ ವಿದ್ಯಾರ್ಥಿ ಪಾಸು ವೈಯಕ್ತಿಕ ಸ್ಮಾರ್ಟ್‌ಕಾರ್ಡ್‌ಆಗಿದ್ದು, ಸದರಿಕಾರ್ಡಿನ ಮುಂಬಾಗದಲ್ಲಿ ವಿದ್ಯಾರ್ಥಿಯ ಭಾವಚಿತ್ರ ಮತ್ತು ಹೆಸರು ಮುದ್ರಿತವಾಗಿರುತ್ತದೆ. ಪ್ರತಿಯೊಂದು ಸ್ಮಾರ್ಟ್‌ಕಾರ್ಡ್‌ಗೂಅನನ್ಯ (ಯುನಿಕ್) ಸಂಖ್ಯೆಯಿದ್ದು, ಕಾರ್ಡಿನ ಮೇಲ್ಭಾಗದಲ್ಲಿ ಮುದ್ರಿತವಾಗಿರುತ್ತದೆ ಹಾಗೂ ಮತ್ತೊಂದುಎಲೆಕ್ಟ್ರಾನಿಕ್‌ಚಿಪ್‌ನಲ್ಲಿಎನ್ಕ್ರಿಪ್ಟ್ ಮಾಡಲಾಗಿರುತ್ತದೆ. **ಸದರಿಚಿಪ್‌ನಲ್ಲಿ ವಿದ್ಯಾರ್ಥಿ ಮಾಹಿತಿ, ವಿದ್ಯಾರ್ಥಿಯು ವಾಸಸ್ಥಳದಿಂದ ಶಾಲಾ/ಕಾಲೇಜಿನವರೆಗೆ ಪ್ರಯಾಣಿಸುವ ಪ್ರಯಾಣದ ವಿವರಗಳಾದ ಎಲ್ಲಿಂದ-ಎಲ್ಲಿಗೆ ಎಂಬ ವಿವರಗಳನ್ನು ಹಾಗೂ ಸ್ಮಾರ್ಟ್‌ಕಾರ್ಡ್‌ನ ಚಾಲ್ತಿ ಅವಧಿಯನ್ನು ಒಳಗೊಂಡಿರುತ್ತದೆ. ಸಂಸ್ಥೆಯು**2017-18 ನೇ ಸಾಲಿನವರೆಗೂ ಪೂರ್ವ ಮುದ್ರಿತ ಪಾಸುಗಳನ್ನು ವಿತರಣೆ ಮಾಡಿದ್ದು, ಈ ವ್ಯವಸ್ಥೆಯು ಅನೇಕ ಅನಾನುಕೂಲಗಳನ್ನು ಒಳಗೊಂಡಿತ್ತು. ಪ್ರಸ್ತುತ ಸ್ಮಾರ್ಟ್‌ಕಾರ್ಡ್ ಸಹಾಯದಿಂದ (closed loop ಟೆಕ್ನಾಲಜಿ ಹೊಂದಿರುವ) ಕರ್ತವ್ಯನಿರತ ನಿರ್ವಾಹಕರು ಇ.ಟಿ.ಎಂಯಂತ್ರದಲ್ಲಿ ಸ್ಮಾರ್ಟ್‌ಕಾರ್ಡನ್ನು

ಟ್ಯಾಪ್ ಮಾಡುವ ಮೂಲಕ ವಿದ್ಯಾರ್ಥಿಯು ತಾನು ಆಯ್ಕೆ ಮಾಡಲಾದ (ಎಲ್ಲಿಂದ–ಎಲ್ಲಿಗೆ) ಚಾಲ್ತಿ ಮಾರ್ಗಗಳಲ್ಲಿಯೇ ಪ್ರಯಾಣಿಸುತ್ತಿರುವ ಬಗ್ಗೆ ಪರಿಶೀಲಿಸಬಹುದಾಗಿದೆ.

2. **ಪಾಸು ವಿತರಣಾ ಕ್ರಮ:** ಬೆಂ.ಮ.ಸಾ.ಸಂಸ್ಥೆಯು 2018–19 ನೇ ಸಾಲಿನಲ್ಲಿ ವಿದ್ಯಾರ್ಥಿ ಪಾಸುಗಳನ್ನು ಕೇಂದ್ರೀಕೃತವಾಗಿ ಕಡಿಮೆ ಸಂಖ್ಯೆಯ ಪಾಸು ವಿತರಣಾ ಕೇಂದ್ರಗಳಲ್ಲಿ ವಿತರಣೆ ಮಾಡಿದ್ದು, ಇದರಿಂದ ಎದುರಿಸಲಾದ ಸಮಸ್ಯೆಗಳ ಬಗ್ಗೆ ಅರಿತುಕೊಂಡಿರುತ್ತದೆ. ಅಲ್ಲದೇ ಅಂಚೆ ಮೂಲಕ ಪಾಸುಗಳ ವಿತರಣೆಯಿಂದಾದ ಸಮಸ್ಯೆಗಳ ಬಗ್ಗೆಯೂ ಸಹ ತಿಳಿದಿರುತ್ತದೆ. ಆದ್ದರಿಂದ ಪ್ರಸ್ತುತ ಸಾಲಿನಲ್ಲಿ ಸಾಕಷ್ಟು ವಿತರಣಾ ಕೇಂದ್ರಗಳನ್ನು ತೆರೆಯಲು ನಿರ್ಧಾರವನ್ನು ಕೈಗೊಂಡಿದ್ದು, ಅದರಂತೆ ಬೆಂಗಳೂರಿನಾದ್ಯಂತ 15 ಸ್ಥಳಗಳಲ್ಲಿ 66 ಪಾಸು ವಿತರಣಾ ಕೇಂದ್ರಗಳನ್ನು ಬಸ್ ನಿಲ್ದಾಣಗಳಲ್ಲಿ ಹಾಗೂ ಟಿಟಿಎಂಸಿಗಳಲ್ಲಿ ತೆರೆಯಲು ಉದ್ದೇಶಿಸಲಾಗಿದೆ (ಪಾಸು ಕೌಂಟರ್‌ಗಳ ಪಟ್ಟಿಯನ್ನು ನೋಡುವುದು).

3. **ಮುಂಗಡಕಾಯ್ದಿರಿಸುವಿಕೆ ವ್ಯವಸ್ಥೆ:** ಪ್ರಸ್ತುತ ಸಾಲಿನಲ್ಲಿ ವಿದ್ಯಾರ್ಥಿಗಳು ಪಾಸನ್ನು ಪಡೆಯಲು ಮುಂಚಿತವಾಗಿ ದಿನಾಂಕ, ಸಮಯ ಹಾಗೂ ಪಾಸ್ ವಿತರಣಾ ಕೇಂದ್ರವನ್ನು ಮುಂಗಡವಾಗಿ ಕಾಯ್ದಿರಿಸುವ ವ್ಯವಸ್ಥೆಯನ್ನು ಪರಿಚಯಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ತಾವು ಆಯ್ಕೆ ಮಾಡಿದ ಪಾಸು ವಿತರಣಾ ಕೇಂದ್ರದಲ್ಲಿ ಹಾಗೂ ಸಮಯದಲ್ಲಿ ಪಾಸನ್ನು ಪಡೆಯಬಹುದಾಗಿರುತ್ತದೆ.

4. **ಆನ್‌ಲೈನ್‌ಅಪ್ಲಿಕೇಷನ್ ಪ್ರಕ್ರಿಯೆ:** ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿವರವಾದ ಸೂಚನೆಗಳು ಈ ಕೆಳಕಂಡಂತಿವೆ. ಎಲ್ಲಾ ವಿದ್ಯಾರ್ಥಿಗಳು (ಹೊಸದಾಗಿ ಪಾಸನ್ನು ಪಡೆಯುವ ಅಥವಾ ನವೀಕರಿಸುವ) ವಿದ್ಯಾರ್ಥಿ ಪಾಸಿಗಾಗಿ ಆನ್‌ಲೈನ್ ಮೂಲಕವೇ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ.

   **ಅ)ಹಳೇ ಪಾಸುಗಳನ್ನು ನವೀಕರಿಸುವ ಬಗ್ಗೆ:** ಕಳೆದ ಸಾಲಿನಲ್ಲಿ ವಿತರಣೆ ಮಾಡಲಾದ ಪಾಸುಗಳ ಚಾಲ್ತಿ ಅವಧಿಯು 10/ 12 ತಿಂಗಳ ಒಳಗೆ ಮುಕ್ತಾಯವಾಗಲಿದೆ. ಸದರಿ ಸ್ಮಾರ್ಟ್‌ಕಾರ್ಡ್‌ನ್ನು ಹೊಂದಿ ವಿದ್ಯಾರ್ಥಿಗಳು ಪ್ರಸ್ತುತ ಸಾಲಿನಲ್ಲಿ (2019–20) ಪ್ರಯಾಣಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಪ್ರಸ್ತುತ ಸಾಲಿನಲ್ಲಿ ಸದರಿ ಸ್ಮಾರ್ಟ್‌ಕಾರ್ಡಿನ ಚಾಲ್ತಿ ಅವಧಿಯನ್ನು ಹಾಗೂ ಎಲ್ಲಿಂದ–ಎಲ್ಲಿಗೆ ಮಾರ್ಗಗಳನ್ನು ನವೀಕರಿಸಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಕಳೆದ ಸಾಲಿನಲ್ಲಿ ಸ್ಮಾರ್ಟ್‌ಕಾರ್ಡನ್ನು ಪಡೆದ ವಿದ್ಯಾರ್ಥಿಗಳು ಈ ಕೆಳಕಂಡ ನಿಯಮಗಳನ್ನು ಅನುಸರಿಸಲು ಸೂಚಿಸಲಾಗಿದೆ.

   1. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಹಳೆಯ ಪಾಸಿನ ನವೀಕರಣ ಕಾಲಂನ್ನು ಆಯ್ಕೆ ಮಾಡುವುದು.
   2. ಬೆಂ.ಮ.ಸಾ.ಸಂಸ್ಥೆಯ ಸ್ಮಾರ್ಟ್‌ಕಾರ್ಡ್ ಸಂಖ್ಯೆಯನ್ನು (ಹಿಂದಿನ ವರ್ಷದ) ನಮೂದಿಸುವುದು.
   3. ಜಾತಿ/ ಶಾಲೆ /ತರಗತಿ /ಕಾಲೇಜು ವರ್ಷಇತ್ಯಾದಿ ವಿವರಗಳನ್ನು ನಮೂದಿಸುವುದು/ ಬದಲಾಯಿಸುವುದು.
   4. OTP ಪರಿಶೀಲನೆ(ವಿದ್ಯಾರ್ಥಿ ಪಾಸಿನ ಅರ್ಜಿಯಲ್ಲಿ ನಮೂದಿಸಲಾದ ಮೊಬೈಲ್ ಸಂಖ್ಯೆಗೆಔಖಿಕ ರವಾನಿಸಲಾಗುವುದು).
   5. ಕಾಲೇಜು/ಬೆಂ.ಮ.ಸಾ.ಸಂಸ್ಥೆಯಿಂದಎಸ್.ಎಂ.ಎಸ್ ಮೂಲಕ ಅನುಮೋದನೆ ಸಿಗುವವರೆಗೂ ಕಾಯುವುದು.
   6. ಎಸ್.ಎಂ.ಎಸ್. ಮೂಲಕ ಅನುಮೋದನೆ ದೊರೆತ ನಂತರ ಪಾಸು ಪಡೆಯುವಕೇಂದ್ರದ (ಹತ್ತಿರವಾದ) ಅಪಾಯಿಟ್‌ಮೆಂಟ್ ಪಡೆದು ಪಾಸು ವಿತರಣಾ ಕೇಂದ್ರಕ್ಕೆ ಭೇಟಿ ನೀಡುವುದು.
   7. ಆಯ್ಕೆ ಮಾಡಿಕೊಂಡ ಪಾಸು ವಿತರಣಾ ಕೇಂದ್ರಕ್ಕೆ ಭೇಟಿ ನೀಡುವ ಸಂಧರ್ಭದಲ್ಲಿ ಪ್ರಸ್ತುತ ಸಾಲಿಗೆ ನವೀಕರಿಸಲು ಸ್ಮಾರ್ಟ್‌ಕಾರ್ಡನ್ನು (ಹೊಸ ಚಾಲ್ತಿ ಅವಧಿ, ಎಲ್ಲಿಂದ–ಎಲ್ಲಿಗೆ) ತರುವುದು.

8. (ಸೂಚನೆ: ಪಾಸಿನ ನವೀಕರಣ ಶುಲ್ಕವು ರೂ.30/-ಕಡಿಮೆಯಾಗಿರುತ್ತದೆ ಹಾಗೂ ಇದೊಂದು ನಿಮಗೆ ಪರಿಸರ ಸ್ನೇಹಿಆಯ್ಕೆಯಾಗಿರುತ್ತದೆ).

**ಆ)ಹೊಸ ಪಾಸಿನ ವಿತರಣೆ ಬಗ್ಗೆ:** 2018-19 ನೇ ಸಾಲಿನಲ್ಲಿ ಸ್ಮಾರ್ಟ್‌ಕಾರ್ಡ್ ಪಾಸನ್ನು ಪಡೆಯದ ವಿದ್ಯಾರ್ಥಿಗಳು ಹಾಗೂ 2018-19 ನೇ ಸಾಲಿನಲ್ಲಿ ಸ್ಮಾರ್ಟ್‌ಕಾರ್ಡನ್ನು ಪಡೆದು ಕಳೆದು ಕೊಂಡಿರುವ ವಿದ್ಯಾರ್ಥಿಗಳು ಹೊಸ ಸ್ಮಾರ್ಟ್‌ಕಾರ್ಡ್ ಪಾಸಿನ ಪ್ರಕ್ರಿಯೆಯನ್ನು ಆಯ್ಕೆ ಮಾಡಿಕೊಳ್ಳುವುದು.

1. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಹೊಸ ಪಾಸು ಎಂಬ ಕಾಲಂನ್ನುಆಯ್ಕೆ ಮಾಡುವುದು.
2. ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳು SAT/PU ದಾಖಲಾತಿ ಸಂಖ್ಯೆ ಅಥವಾ ಪ್ರವೇಶಾತಿ ಸಂಖ್ಯೆಯನ್ನು ನಮೂದಿಸುವುದು. ರಾಜ್ಯ ಪಠ್ಯಕ್ರಮ ಅಲ್ಲದ ಮತ್ತು ಇತರೆ ಕಾಲೇಜು ವಿದ್ಯಾರ್ಥಿಗಳು ದಾಖಲಾತಿ ಸಂಖ್ಯೆಯನ್ನು ನಮೂದಿಸುವುದು (ದಾಖಲಾತಿ ಸಂಖ್ಯೆಯು ಅನನ್ಯ ಸಂಖ್ಯೆಯಾಗಿದ್ದು, ವಿದ್ಯಾರ್ಥಿಗಳು ಶಾಲಾ/ಕಾಲೇಜು ದಾಖಲಾಗುವಾಗ ಶಿಕ್ಷಣ ಸಂಸ್ಥೆಯಿಂದಒಂದು ಬಾರಿ ಮಾತ್ರ ನೀಡುವ ಸಂಖ್ಯೆಯಾಗಿರುತ್ತದೆ).
3. ಜಾತಿ/ಶಾಲೆ/ತರಗತಿ/ಕಾಲೇಜು ವರ್ಷ ಇತ್ಯಾದಿ ವಿವರಗಳನ್ನು ನಮೂದಿಸುವುದು.
4. OTP ಪರಿಶೀಲನೆ (ವಿದ್ಯಾರ್ಥಿ ಪಾಸಿನ ಅರ್ಜಿಯಲ್ಲಿ ನಮೂದಿಸಲಾದ ಮೊಬೈಲ್ ಸಂಖ್ಯೆಗೆಔಖಿಅ ರವಾನಿಸಲಾಗುವುದು).
5. ಕಾಲೇಜು/ಬೆಂ.ಮ.ಸಾ.ಸಂಸ್ಥೆಯಿಂದಎಸ್.ಎಂ.ಎಸ್ ಮೂಲಕ ಅನುಮೋದನೆ ಸಿಗುವವರೆಗೂ ಕಾಯುವುದು.
6. ಎಸ್.ಎಂ.ಎಸ್. ಮೂಲಕ ಅನುಮೋದನೆ ದೊರೆತ ನಂತರ ಪಾಸು ಪಡೆಯುವ ಕೇಂದ್ರದ (ಹತ್ತಿರವಾದ) ಅಪಾಯಿಟ್‌ಮೆಂಟ್ ಪಡೆದು ಪಾಸು ವಿತರಣಾ ಕೇಂದ್ರಕ್ಕೆ ಭೇಟಿ ನೀಡುವುದು.
7. ಪಾಸು ವಿತರಣಾ ಕೇಂದ್ರದಲ್ಲಿ ಭಾವಚಿತ್ರ ತೆಗೆದ ನಂತರ ಸ್ಮಾರ್ಟ್‌ಕಾರ್ಡನ್ನು ಪಡೆಯುವುದು.

**ಇ) ಪಾಸಿನ ಮುದ್ರಣದ ಸ್ಥಿತಿ ಹಾಗೂ ಎಸ್‌ಎಂಎಸ್‌ರವಾನೆ:** ಪಾಸಿಗಾಗಿ ಅರ್ಜಿ ಸಲ್ಲಿಸಿದ ನಂತರ ಪ್ರತಿಯೊಂದು ಹಂತದ ಪ್ರಕ್ರಿಯೆಯ ವಿವರಗಳನ್ನು ಎಸ್.ಎಂ.ಎಸ್ ಮೂಲಕ ರವಾನಿಸಲಾಗುವುದು ಹಾಗೂ OTP ಪರಿಶೀಲನೆಗಾಗಿ ಸರಿಯಾದ ಮೊಬೈಲ್ ಸಂಖ್ಯೆಯನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಒಂದು ಮೊಬೈಲ್ ಸಂಖ್ಯೆಯ ಮೂಲಕ 3 ಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ. ವಿದ್ಯಾರ್ಥಿ ಪಾಸಿಗಾಗಿ ಅರ್ಜಿ ಸಲ್ಲಿಸಿದ ನಂತರ, ಅರ್ಜಿಯ ಸ್ಥಿತಿಯನ್ನು ಆನ್‌ಲೈನ್ ಮೂಲಕ ತಿಳಿಯಬಹುದಾಗಿದೆ. ವಿದ್ಯಾರ್ಥಿ ಸಲ್ಲಿಸಿದ ಅರ್ಜಿಯು ಶಾಲೆ/ಕಾಲೇಜಿನ ಅಧಿಕಾರಿಗಳು / ಬೆಂ.ಮ.ಸಾ.ಸಂಸ್ಥೆಯ ಅಧಿಕಾರಿಗಳು ಅನುಮೋದನೆ ನೀಡಿದ ನಂತರ ಎಸ್.ಎಂ.ಎಸ್.ನ್ನು ರವಾನಿಸಲಾಗುವುದು. ಎಸ್.ಎಂ.ಎಸ್ ಸ್ವೀಕರಿಸಿದ ನಂತರ ಹತ್ತಿರ ಪಾಸ್‌ಕೌಂಟರ್, ದಿನಾಂಕ ಮತ್ತು ಸಮಯ ಮುಂಗಡವಾಗಿ ಕಾಯ್ದಿರಿಸಿ, ಆ ದಿನಾಂಕ ಮತ್ತು ಸಮಯಕ್ಕೆ ಆಯ್ಕೆ ಮಾಡಿದ ಪಾಸು ವಿತರಣಾ ಕೇಂದ್ರಕ್ಕೆ ಭೇಟಿ ನೀಡಿ ಹೊಸ ಪಾಸನ್ನು ಪಡೆಯಬಹುದು ಅಥವಾ ಹಳೆಯ ಪಾಸನ್ನು ನವೀಕರಿಸಿಕೊಳ್ಳಬಹುದಾಗಿರುತ್ತದೆ. 2018-19 ನೇ ಸಾಲಿನ ಸ್ಮಾರ್ಟ್‌ಕಾರ್ಡ್ ಹೊಂದಿದ ವಿದ್ಯಾರ್ಥಿಗಳು ಸದರಿ ಕಾರ್ಡನ್ನು ನವೀಕರಿಸಿಕೊಳ್ಳಬೇಕು ಹಾಗೂ ಇತರೆ ವಿದ್ಯಾರ್ಥಿಗಳು ಅಂದರೆ ಹೊಸದಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ನೂತನ ಸ್ಮಾರ್ಟ್‌ಕಾರ್ಡ್ ಪಾಸನ್ನು ಪಡೆಯುವುದು.

**ಈ. ಬಸ್ ನಿಲ್ದಾಣಆಯ್ಕೆ ಮಾಡುವ ವಿಧಾನ:** ವಿದ್ಯಾರ್ಥಿಗಳು ಪಾಸಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗಎಲ್ಲಿಂದ- ಎಲ್ಲಿಗೆ ಮತ್ತುಮಾರ್ಗ ಬದಲಾವಣೆ ಬಸ್ ನಿಲ್ದಾಣಗಳನ್ನು (ಮಾರ್ಗ ಬದಲಾವಣೆ ಅವಶ್ಯವಿದ್ದಲ್ಲಿ) ಸರಿಯಾಗಿ ಆಯ್ಕೆಮಾಡುವುದು. ಈ ವಿವರಗಳು ಸ್ಮಾರ್ಟ್‌ಕಾರ್ಡ್‌ನ ಮೆಮೋರಿಯಲ್ಲಿ

ಶೇಖರಿಸಲಾಗುವುದು ಹಾಗೂ ವಿದ್ಯಾರ್ಥಿಯು ಸ್ಮಾರ್ಟ್‌ಕಾರ್ಡ್‌ನ್ನು ಹೊಂದಿ ಸಂಸ್ಥೆಯ ಸೇವೆಗಳಲ್ಲಿ ಪ್ರಯಾಣಿಸುವಾಗ ಇ.ಟಿ.ಎಂ ಮೂಲಕ ವ್ಯಾಲಿಡೇಟ್ ಮಾಡಲಾಗುವುದು.

**ಉ. ಪರೀಕ್ಷಾಹಂತ:** ಸ್ಮಾರ್ಟ್‌ಕಾರ್ಡ್ ಪಾಸುಗಳ ವ್ಯಾಲಿಡೇಷನ್ ತಂತ್ರಾಂಶಗಳನ್ನು ವಿವಿಧ ಹಂತಗಳಲ್ಲಿ ಹಲವು ಇ.ಟಿ.ಎಂ ಯಂತ್ರಗಳಿಗೆ ಅಳವಡಿಸಲಾಗುವುದು. ಈ ತಂತ್ರಾಂಶದ ಪರೀಕ್ಷಾ ಹಂತದಲ್ಲಿ ವಿದ್ಯಾರ್ಥಿಗಳು ಕರ್ತವ್ಯನಿರತ ನಿರ್ವಾಹಕರೊಂದಿಗೆ ಸಹಾಯ ಮತ್ತು ಸಹಕರಿಸಲುಕೋರಲಾಗಿದೆ.

5. **ವಿದ್ಯಾರ್ಥಿಗಳಿಗೆ ಸೂಚನೆಗಳು: ವಿದ್ಯಾರ್ಥಿ ಪಾಸಿನ ಅರ್ಜಿಯ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳ ಪಠ್ಯಕ್ರಮವನ್ನು ಆಧರಿಸಿ ಮಾರ್ಪಡಿಸಲಾಗಿದೆ ಅಂದರೆ SATS/CBSE/ICSE ಅಥವಾ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಕೋರ್ಸ್‌ಗಳ ಅನುಗುಣವಾಗಿ ಮಾರ್ಪಡಿಸಲಾಗಿದೆ.**

**ಅ. ರಾಜ್ಯ ಪಠ್ಯಕ್ರಮ ಅಭ್ಯಸಿಸುತ್ತಿರುವ 1 ರಿಂದ 10 ತರಗತಿಯವರೆಗಿನ ವಿದ್ಯಾರ್ಥಿಗಳು ಮತ್ತು ಪಿ.ಯು.ಸಿ ವಿದ್ಯಾರ್ಥಿಗಳು (SATS/PU Board)**

I. ರಾಜ್ಯ ಶಿಕ್ಷಣ ಪಠ್ಯಕ್ರಮ ಅಳವಡಿಸಿಕೊಂಡಿರುವ ಶಾಲಾ/ಕಾಲೇಜುಗಳು SATS/PU ದಾಖಲಾತಿ ಸಂಖ್ಯೆಯನ್ನು ಹೊಂದಿರುವುದು ಹಾಗೂ ನಿಗಧಿಪಡಿಸಿದ ಸೂಚನೆಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ. ರಾಜ್ಯ ಶಿಕ್ಷಣ ಪಠ್ಯಕ್ರಮ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳು ಅರ್ಜಿಯಲ್ಲಿ SATS/PU ದಾಖಲಾತಿ ಸಂಖ್ಯೆಯನ್ನು ಮತ್ತು ಹುಟ್ಟಿದ ದಿನಾಂಕವನ್ನು ನಮೂದಿಸುವುದು ಕಡ್ಡಾಯವಾಗಿರುತ್ತದೆ.

II. 1ನೇ ತರಗತಿಯಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳ ಅರ್ಜಿಗಳನ್ನು ಬೆಂ.ಮ.ಸಾ.ಸಂಸ್ಥೆಯ ಸಿಬ್ಬಂದಿಗಳು ಅನುಮೋದಿಸುತ್ತಾರೆ. ಶಾಲೆಯ ಸಿಬ್ಬಂದಿಗಳು ಅರ್ಜಿಗಳ ಅನುಮೋದನೆಯ ಕಾರ್ಯವನ್ನು ನಿರ್ವಹಿಸುವ ಅವಕಾಶವಿರುವುದಿಲ್ಲ.

III. ಪಿ.ಯು. ವಿದ್ಯಾರ್ಥಿಗಳ ಅರ್ಜಿಗಳನ್ನು ಸದರಿ ಕಾಲೇಜಿನಿಂದಲೇ ಅನುಮೋದಿಸುವುದು.

IV. **ಅಪ್‌ಲೋಡ್ ಮಾಡಬೇಕಾದ ದಾಖಲೆಗಳು:**

- **1 ರಿಂದ 10 ತರಗತಿಯವರೆಗಿನ ವಿದ್ಯಾರ್ಥಿಗಳು ಬೆಂ.ಮ.ಸಾ.ಸಂಸ್ಥೆಯ ವೆಬ್‌ಸೈಟ್‌ನಲ್ಲಿ ದೊರೆಯುವ ನಿಗಧಿಪಡಿಸಿದ ಅರ್ಜಿಯ ನಮೂನೆಯನ್ನು ಭರ್ತಿ ಮಾಡಿ, ಶಾಲಾ ಮುಖ್ಯಸ್ಥರಿಂದ ದೃಢೀಕರಿಸಿ ಅಪ್‌ಲೋಡ್‌ಮಾಡುವುದು.**
- **ಪಿ.ಯು. ವಿದ್ಯಾರ್ಥಿಗಳು ಅಪಲೋಡ್ ಮಾಡಬೇಕಾಗಿರುವ ದಾಖಲೆಗಳು:**
  - ✓ **ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಜೆಪಿಜಿ ನಮೂನೆ ಪ್ರಕಾರ(1 ಎಂಬಿ ವರೆಗೆ)**
  - ✓ **ಶುಲ್ಕ ಪಾವತಿಸಿದ ರಸೀದಿಯ ಪ್ರತಿ. (ದಾಖಲಾತಿ ಸಂಖ್ಯೆಯನ್ನು ಶುಲ್ಕ ಪಾವತಿ ರಸೀದಿಯಲ್ಲಿ ನಮೂದಿಸಿರಬೇಕು)**

**ಆ. ಸಿ.ಬಿ.ಎಸ್.ಇ/ಐ.ಸಿ.ಎಸ್.ಇ ಪಠ್ಯಕ್ರಮದ 1 ರಿಂದ 12ನೇ ತರಗತಿಯ ಮತ್ತು ಪದವಿ/ವೃತ್ತಿಪರ/ತಾಂತ್ರಿಕ/ವೈಧ್ಯಕೀಯ/ಸಂಜೆಕಾಲೇಜು/ ಪಿ.ಹೆಚ್.ಡಿಕೋರ್ಸ್/ ಸಮಾಜ ಕಲ್ಯಾಣ ಇಲಾಖೆಯಿಂದ ಮಾನ್ಯತೆ ಹೊಂದಿದ ವಿಶೇಷ ಶಾಲೆಗಳು.**

I. ವಿದ್ಯಾರ್ಥಿಗಳು ಶುಲ್ಕ ಪಾವತಿಸಿದ ರಸೀದಿಯಲ್ಲಿರುವ ಪ್ರವೇಶಾತಿ ಸಂಖ್ಯೆಯನ್ನು ನಮೂದಿಸಿ, ಅಪ್‌ಲೋಡ್ ಮಾಡುವುದು ಹಾಗೂ ನಿಗಧಿಪಡಿಸಿದ ಪ್ರಕ್ರಿಯೆಯನ್ನು ಅನುಸರಿಸುವುದು.

II. ಸದರಿ ಅರ್ಜಿಗಳನ್ನು ಸಂಬಂಧಿಸಿದ ಶಾಲಾ/ಕಾಲೇಜುಗಳು ಅನುಮೋದಿಸುವುದು.

III. **ಅಪ್‌ಲೋಡ್ ಮಾಡಬೇಕಾದ ದಾಖಲೆಗಳು:**

- **ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಜೆಪಿಜಿ ನಮೂನೆ ಪ್ರಕಾರ(1 ಎಂಬಿ ವರೆಗೆ)**
- **ಶುಲ್ಕ ಪಾವತಿಸಿದ ರಸೀದಿಯ ಪ್ರತಿ (ದಾಖಲಾತಿ ಸಂಖ್ಯೆಯನ್ನು ಶುಲ್ಕ ಪಾವತಿ ರಸೀದಿಯಲ್ಲಿ ನಮೂದಿಸಿರಬೇಕು)**

6. **ಶಿಕ್ಷಣ ಸಂಸ್ಥೆಗಳಿಗೆ ಸೂಚನೆಗಳು:** ಎಲ್ಲಾ ಐಸಿಎಸ್‌ಇ ಮತ್ತು ಸಿಬಿಎಸ್‌ಇ ಶಾಲೆಗಳು ಹಾಗೂ ಪಿಯುಸಿ ಕಾಲೇಜು ಮತ್ತು ಇತರೆ ಕಾಲೇಜು/ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಬೇಕಾಗಿರುವುದರಿಂದ ಬೆಂ.ಮ.ಸಾ.ಸಂಸ್ಥೆಯ ವೆಬ್‌ಸೈಟ್‌ನಲ್ಲಿ ವಿದ್ಯಾರ್ಥಿ ಪಾಸಿಗಾಗಿ ಶಾಲಾ/ಕಾಲೇಜನ್ನು ನೋಂದಣಿ ಮಾಡಿಕೊಳ್ಳಲು ಕೋರಲಾಗಿದೆ. ಈ ಸಂಬಂಧ ಕೆಳಕಂಡ ಪ್ರಕ್ರಿಯೆಯನ್ನು ಅನುಸರಿಸುವುದು.

**ಅ.ಆನ್‌ಲೈನ್ ನೊಂದಣಿ/ನೋಡಲ್‌ಅಧಿಕಾರಿಯ ನಿಯೋಜನೆ:** ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರುಅವರಶಿಕ್ಷಣ ಸಂಸ್ಥೆಗೆ ಸಂಬಂಧಿಸಿದಂತೆ ಬೆಂ.ಮ.ಸಾ.ಸಂಸ್ಥೆಯೊಂದಿಗೆ ವ್ಯವಹರಿಸುವ ಓರ್ವ ನೋಡಲ್ ಅಧಿಕಾರಿಯನ್ನು ನಿಯೋಜಿಸಲು ಕೋರಲಾಗಿದೆ. ಬೆಂ.ಮ.ಸಾ.ಸಂಸ್ಥೆಯಿಂದ **ವಿಭಾಗೀಯ ಸಂಚಾರ ಅಧಿಕಾರಿ, ಯೋಜನೆ(e-mail:-** dtostudentpass@mybmtc.com)ರವರನ್ನು ನೋಡಲ್‌ಅಧಿಕಾರಿಯನ್ನಾಗಿ ನಿಯೋಜಿಸಲಾಗಿದೆ.

ಪ್ರತಿಯೊಂದು ಶಾಲಾ/ಕಾಲೇಜಿನ ನೋಡಲ್ ಅಧಿಕಾರಿಯನ್ನು ಆನ್‌ಲೈನ್ ಮೂಲಕ ನೋಂದಣಿ ಮಾಡುವುದು ಹಾಗೂ ನಿಗಧಿಪಡಿಸಿರುವ ಈ ಕೆಳಕಂಡ ಎಲ್ಲಾ ಮಾಹಿತಿಯನ್ನುಅಪ್‌ಲೋಡ್ ಮಾಡುವುದು.

I. ನಿಗಧಿಪಡಿಸಿದ ನಮೂನೆಯಲ್ಲಿಶಿಕ್ಷಣ ಸಂಸ್ಥೆಯ ಮುಖ್ಯಸ್ಥರ ಧೃಢಿಕೃತ ಪತ್ರ

II. ಶಾಲಾ/ಕಾಲೇಜು ಮಾನ್ಯತೆ ಪಡೆದಿರುವ ಪತ್ರ.

**ಆ. ಬಳಕೆದಾರರ ಹೆಸರು ಮತ್ತು ಪಾಸ್‌ವರ್ಡ್:** ಶಾಲಾ/ಕಾಲೇಜಿನ ನೋಡಲ್ ಅಧಿಕಾರಿಯ ನೋಂದಣಿ ಕಾರ್ಯವು ಮುಕ್ತಾಯವಾದ ನಂತರ ನೋಡಲ್‌ಅಧಿಕಾರಿಯ ದೂರವಾಣಿಗೆ ಯುಸರ್‌ನೇಮ್ ಮತ್ತು ಪಾಸ್‌ವರ್ಡ್‌ನ್ನು ರವಾನಿಸಲಾಗುವುದು. ಈ ಯುಸರ್‌ನೇಮ್ ಮತ್ತು ಪಾಸ್‌ವರ್ಡ್‌ನ್ನು ಬಳಸಿ ವಿದ್ಯಾರ್ಥಿ ಪಾಸ್ ಪೋರ್ಟಲ್‌ನಲ್ಲಿ ಲಾಗಿನ್ ಆಗಬಹುದಾಗಿದೆ. ಈ ಪೋರ್ಟಲ್ ಮೂಲಕ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ, ದೃಢೀಕರಿಸಿ ಅನುಮೋದಿಸಬೇಕಾಗಿರುತ್ತದೆ.

**ಇ. ನೋಡಲ್ ಅಧಿಕಾರಿಗಳಿಂದ ವಿದ್ಯಾರ್ಥಿ ಪಾಸು ಅರ್ಜಿಗಳ ಪರಿಶೀಲನೆ:** ನೋಡಲ್‌ಅಧಿಕಾರಿಯು ವಿದ್ಯಾರ್ಥಿ ಪಾಸಿಗಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಅರ್ಜಿಯನ್ನು ಅನುಮೋದಿಸುವ ಮೊದಲು ಈ ಕೆಳಕಂಡ ಮಾಹಿತಿಯನ್ನು ಪರಿಶೀಲಿಸುವುದು ಅತ್ಯಗತ್ಯವಾಗಿರುತ್ತದೆ.

I. ವಿದ್ಯಾರ್ಥಿ ಸದರಿ ಶಾಲೆ/ಕಾಲೇಜಿನಲ್ಲಿ ವ್ಯಾಸಂಗ ಮಾಡಲಾಗುತ್ತಿದೆಯೇ? / ಇಲ್ಲವೇ?

II. ವಿದ್ಯಾರ್ಥಿಯು 2019–20 ನೇ ಸಾಲಿನ ಶೈಕ್ಷಣಿಕ ವರ್ಷದ ಶುಲ್ಕವನ್ನು ಪಾವತಿಸಲಾಗಿದೆಯೇ?/ ಇಲ್ಲವೇ.

III. ಪ್ರವೇಶಾತಿ ಸಂಖ್ಯೆಯನ್ನು ಸರಿಯಾಗಿ ನಮೂದಿಸಲಾಗಿದೆಯೇ.

IV. ವಿದ್ಯಾರ್ಥಿಯು ನಮೂದಿಸಿರುವ ಜಾತಿಯು, ದಾಖಲಾತಿಗಳ ಪ್ರಕಾರ ಸರಿಯಾಗಿದೆಯೇ.

V. ವಿದ್ಯಾರ್ಥಿಯು ಭರ್ತಿ ಮಾಡಿರುವ ಇತರೆ ವಿವರಗಳು ಸರಿಯಾಗಿದೆಯೇಎಂಬುದನ್ನು ಪರಿಶೀಲಿಸುವುದು.

**ಈ. ಅನುಸರಿಸಬೇಕಾದ ಜವಾಬ್ದಾರಿಗಳು:** ನೋಡಲ್ ಅಧಿಕಾರಿಗಳು ವಿದ್ಯಾರ್ಥಿರಿ ಯಾಯಿತಿ ಪಾಸಿನ ಅರ್ಜಿಯನ್ನು ಅನುಮೋದನೆ ನೀಡಬೇಕಾದ ನಿರ್ಣಾಯಕ ಪಾತ್ರ ಹೊಂದಿರುವುದರಿಂದ ಸದರಿ ಕಾರ್ಯಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿಜವಾಬ್ದಾರಿಯಿಂದ ಪರಿಶೀಲಿಸುವುದು.

**ಉ. ತರಬೇತಿ ಮತ್ತು ಸಂವಹನ:** ವಿದ್ಯಾರ್ಥಿ ಪಾಸು ವಿತರಣೆಗೆ ಸಂಬಂಧಿಸಿದ ಮಾಹಿತಿಯನ್ನುಎಲ್ಲಾ ಶಾಲಾ/ಕಾಲೇಜುಗಳಿಗೆ ಒದಗಿಸಲು ಒಂದು ಫೇಸ್‌ಬುಕ್ ಗುಂಪನ್ನು ರಚಿಸಲಾಗುವುದು ಹಾಗೂ ತರಬೇತಿ ವಿಡಿಯೋಗಳನ್ನು ರವಾನಿಸಲಾಗುವುದು.